**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ**

ಸಿ.ಸಿ. ನಂ.33/2023

CW-3/PW-3

| | | |
|---|---|---|
| ಹೆಸರು | ः- | ಚೈತ್ರ |
| ಗಂಡನ ಹೆಸರು | ः- | ಮನು |
| ವಯಸ್ಸು | ः- | 30 ವರ್ಷ |
| ವೃತ್ತಿ | ः- | ಗೃಹಿಣಿ |
| ವಾಸ ಸ್ಥಳ | ः- | ರಾಯರದೊಡ್ಡಿ |
| ದಿನಾಂಕ | ः- | 04.01.2024 |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

ಚಾಸಾ-1 ನನ್ನ ಅತ್ತೆ. ನಾನು ನನ್ನ ಅತ್ತೆಯನ್ನು ನೋಡಲೆಂದು ದಿನಾಂಕ 07.03.2023 ರಂದು ನನ್ನ ಅತ್ತೆಯ ಮನೆಗೆ ಹೋಗಿದ್ದೆನು. ಆಗ ಸಮಯ ಮಧ್ಯಾಹ್ನ 12.00 ಗಂಟೆಯಾಗಿತ್ತು. ಆ ಸಮಯದಲ್ಲಿ ಅಲ್ಲಿ ನನ್ನ ಅತ್ತೆ ಹಾಗೂ ನನ್ನ ನಾದಿನಿಯಾದ ಆರೋಪಿ ಮನೆಯಲ್ಲಿದ್ದರು. ನಾನು ನನ್ನ ಅತ್ತೆಯೊಂದಿಗೆ ಮಾತನಾಡಿಕೊಂಡು ಅಲ್ಲಿಂದ ನನ್ನ ನಾದಿನಿ ವನಿತರವರ ಮನೆಗೆ ಹೊರಟುಹೋದೆನು. ಆಗ ನನ್ನ ಅತ್ತೆಯ ಮನೆಯಲ್ಲಿ ನನ್ನ ಅತ್ತೆ ಹಾಗೂ ಆರೋಪಿ ಇದ್ದರು. ನಾನು ಪುನಃ ಮಧ್ಯಾಹ್ನ 2.15 ರ ವೇಳೆಗೆ ನನ್ನ ಅತ್ತೆಯ ಮನೆಗೆ ವಾಪಸ್ಸಾಗಿದ್ದು ಅಲ್ಲಿ ಜನರೆಲ್ಲಾ ಸೇರಿದ್ದು ನನ್ನ ಅತ್ತೆ ಗಾಬರಿಯಾಗಿದ್ದು ಯಾರೋ ನನ್ನ ಅತ್ತೆಯ ಚಿನ್ನದ ಮಾಂಗಲ್ಯದ ಸರವನ್ನು ಕಿತ್ತುಕೊಂಡು ಹೋಗಿದ್ದರೆಂದು ಗೊತ್ತಾಯಿತು. ನನ್ನ ಅತ್ತೆಯನ್ನು ಘಟನೆಯ ಕುರಿತು ವಿಚಾರಿಸಲಾಗಿ ಅವರ ಸರವನ್ನು ಕಿತ್ತುಕೊಂಡಂತಹ ವ್ಯಕ್ತಿ ಬಾಯಿಗೆ ಬಟ್ಟೆಯನ್ನು

ಸುತ್ತಿಕೊಂಡಿದ್ದ ಕಾರಣದಿಂದ ಅವರು ಯಾರು ಎನ್ನುವುದು ತನಗೆ ಗೊತ್ತಾಗಲಿಲ್ಲ ಎಂದು ತಿಳಿಸಿದರು. ಆ ಸಮಯದಲ್ಲಿ ನಮ್ಮ ಅತ್ತೆಯನ್ನು ಹಾಗೂ ಗ್ರಾಮಸ್ಥರನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ. ಆ ನಂತರ ಸ್ಥಳಕ್ಕೆ ನನ್ನ ಗಂಡ ಹಾಗೂ ನನ್ನ ಭಾವ/ಚಾಸಾ-2 ಬಂದರು. ನನ್ನ ಗಂಡ ಹಾಗೂ ಚಾಸಾ-2 ರವರು ನನ್ನ ಅತ್ತೆಯನ್ನು ಠಾಣೆಗೆ ಕರೆದುಕೊಂಡು ಹೋದರು. ಘಟನೆಯ ಮರುದಿನ ನನ್ನ ಗಂಡನನ್ನು ಠಾಣೆಗೆ ಕರೆಸಿದ್ದಾಗ ನನ್ನ ಅತ್ತೆಯ ಮಾಂಗಲ್ಯದ ಸರವನ್ನು ನನ್ನ ನಾದಿನಿ/ಆರೋಪಿ ಕದ್ದಿದ್ದರು ಎಂದು ವಿಚಾರ ಗೊತ್ತಾಯಿತು ಎಂದು ನನಗೆ ನನ್ನ ಗಂಡ ತಿಳಿಸಿದರು. ಈ ಕುರಿತು ಪೊಲೀಸರ ಮುಂದೆ ನಾನು ಹೇಳಿಕೆ ಕೊಟ್ಟಿದ್ದೇನೆ. ನನ್ನ ನಾದಿನಿಯಾದ ಆರೋಪಿಯನ್ನು ಈಗ ನೋಡುತ್ತಿದ್ದು ಗುರುತಿಸುತ್ತೇನೆ.

ಪಾಟೀ ಸವಾಲು ಆರೋಪಿ ಪರಃ-

ಆರೋಪಿ ಹಾಜರಿದ್ದು ತನ್ನ ವಕೀಲರನ್ನು ಬದಲಾಯಿಸುವುದಾಗಿ ತಿಳಿಸಿದ್ದು, ಪಾಟೀ ಸವಾಲನ್ನು ಮುಂದೂಡಲು ಯಾವುದೇ ಸಕಾರಣಗಳು ಇಲ್ಲವೆಂದು ಪರಿಗಣಿಸಿ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಸರಸ್ವತಿ ಕೆ.ಎನ್.)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.